ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020-21 ದಿನಾಂಕ : 20-11-2020

# ಮಾಧ್ಯಮ ಆಮಂತ್ರಣ

1) ಜೀವ ವೈವಿಧ್ಯ ಮಂಡಳಿ ಆಶ್ರಯದಲ್ಲಿ ಔಷಧಿ ಮೂಲಿಕಾ ಸಂಪತ್ತಿನ ಸಂರಕ್ಷಣೆ-ಸವಾಲುಗಳು ಹಾಗೂ ಮುಂದಿನ ಯೋಜನೆಗಳ ಕುರಿತು ರಾಜ್ಯಮಟ್ಟದ ಸಮಾಲೋಚನಾ ಕಾರ್ಯಾಗಾರ

ಕಾರ್ಯಾಗಾರದ ಉದ್ಘಾಟನೆ :
ಆನಂದ ಸಿಂಗ್,
ಅರಣ್ಯ ಸಚಿವರು

ಅಧ್ಯಕ್ಷತೆ :
ಅನಂತ ಹೆಗಡೆ ಅಶೀಸರ,
ಅಧ್ಯಕ್ಷರು, ಜೀವವೈವಿಧ್ಯ ಮಂಡಳಿ

ದಿನಾಂಕ : 21-11-2020, ಶನಿವಾರ ಸಮಯ : ಬೆಳಿಗ್ಗೆ 11 ಗಂಟೆಗೆ
ಸ್ಥಳ : ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು

2) ಕರ್ನಾಟಕ ಜಾನಪದ ಅಕಾಡೆಮಿ
2019ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಪ್ರದಾನ ಹಾಗೂ 2014 ರಿಂದ 2017 ರ ಪುಸ್ತಕ ಬಹುಮಾನ ವಿತರಣಾ ಸಮಾರಂಭ :

ಪ್ರಶಸ್ತಿ ಪ್ರದಾನ:

ಡಿ. ವಿ. ಸದಾನಂದಗೌಡ,

ರಾಸಾಯನಿಕ ಮತ್ತು ರಸಗೊಬ್ಬರ ಕೇಂದ್ರ ಸಚಿವರು.

ಅಧ್ಯಕ್ಷತೆ
ಮಾತಾ ಬಿ, ಮಂಜಮ್ಮ ಜೋಗತಿ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ದಿನಾಂಕ: 21–11–2020, ಶನಿವಾರ, ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು

3) ವಿಶ್ವ ಮೀನುಗಾರಿಕಾ ದಿನಾಚರಣೆ ಹಾಗೂ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಕುರಿತ ಕಾರ್ಯಾಗಾರ :

ಉದ್ಘಾಟನೆ :

ಬಿ. ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ : 21–11–2020 ಶನಿವಾರ ಸಮಯ : ಬೆಳಿಗ್ಗೆ 11–00 ಗಂಟೆಗೆ
ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು

## ಪತ್ರಿಕಾ ಪ್ರಕಟಣೆ

### ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಸುಮಾರು 7 ಲಕ್ಷ ಸದಸ್ಯರು ನೋಂದಣಿ: ಎಸ್. ಸುರೇಶ್ ಕುಮಾರ್

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ): ಕೋವಿಡ್–19ರ ಸಮಯದಲ್ಲಿ ಸಾರ್ವಜನಿಕರ ಗ್ರಂಥಾಲಯ ಇಲಾಖೆ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ " ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ" ಜಾಲತಾಣವನ್ನು ಸ್ಥಾಪಿಸಿದ್ದು, ರಾಜ್ಯಾದ್ಯಾದಂತ ಈವರೆಗೆ ಸುಮಾರು 7 ಲಕ್ಷ ಸದಸ್ಯರು ನೋಂದಣಿಯಾಗಿದ್ದಾರೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರಾದ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಅವರು ಇಂದು ರಾಜಾಜಿನಗರದ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಸಮಾರೋಪದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕಳೆದ ಆರು ತಿಂಗಳಲ್ಲಿ 272 ಡಿಜಿಟಲ್ ಗ್ರಂಥಾಲಯ ಪ್ರಾರಂಭಿಸಿದ್ದು, ಇದು ದೇಶದಲ್ಲೇ ಅಭೂತಪೂರ್ವ ಪ್ರಯತ್ನ ಎಂದ ಸಚಿವರು, ಶತಮಾನೋತ್ಸವ ಗ್ರಂಥಾಲಯ ಕಟ್ಟುವ ಉದ್ದೇಶ ಹೊಂದಲಾಗಿದೆ ಎಂದರು.

ಸಾರ್ವಜನಿಕ ಗ್ರಂಥಾಲಯ ಎಂದರೆ, ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯ ಇದ್ದಂತೆ. ವಯೋಬೇದ, ಲಿಂಗಬೇದವಿಲ್ಲದೆ ಎಲ್ಲರಿಗೂ ಜ್ಞಾನಾರ್ಜನೆ, ಸಾಮಾಜಿಕ ಶಿಕ್ಷಣ, ಮಾಹಿತಿ ಪ್ರಸಾರ ಮಾಡುವ ಜೀವಂತ ಶಕ್ತಿ ನಮ್ಮ ಗ್ರಂಥಾಲಯಕ್ಕಿದೆ ಎಂದರು.

ಭಾರತದಲ್ಲಿಯೇ ನಮ್ಮ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ದೃಷ್ಟಿಯಿಂದ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಸಾಹಿತ್ಯಾಭಿರುಚಿ, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ, ಸಾಮಾಜಿಕ ಪ್ರಜ್ಞೆ ಇವುಗಳನ್ನು ಸಾರ್ವಜನಿಕರಲ್ಲಿ ಮೂಡಿಸುವುದು ರಾಷ್ಟ್ರೀಯ ಸಪ್ತಾಹದ ಗುರಿಯಾಗಿದೆ ಎಂದರು.

ರಾಜ್ಯದಲ್ಲಿ ಒಟ್ಟು 7 ಸಾವಿರ ಗ್ರಂಥಾಲಗಳಿದ್ದು, ರಾಜ್ಯ ಕೇಂದ್ರ ಗ್ರಂಥಾಲಯ-1, ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ-1, ಜಿಲ್ಲಾ ಕೇಂದ್ರ ಗ್ರಂಥಾಲಯಗಳು- 30, ನಗರ ಕೇಂದ್ರ ಗ್ರಂಥಾಲಯಗಳು- 26, ಸಂಚಾರಿ ಗ್ರಂಥಾಲಯಗಳು – 12, ಶಾಖಾ ಗ್ರಂಥಾಲಯಗಳು –519, ಸೇವಾಕೇಂದ್ರಗಳು – 145, ಗ್ರಾಮಪಂಚಾಯಿತಿಗಳಲ್ಲಿ – 5,766, ಕೊಳಚೆ ಪ್ರದೇಶದ ಗ್ರಂಥಾಲಯಗಳು – 100, ಅಲೆಮಾರಿ-127, ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯ-31 ಹಾಗೂ 83 ವಾಚನಾಲಯಗಳನ್ನು ಹೊಂದಿದೆ ಎಂದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನೂತನ ವೆಬ್‌ಸೈಟ್ ಹಾಗೂ ನಗರದ ಕೇಂದ್ರ ಗ್ರಂಥಾಲಯ ಉತ್ತರ ವಲಯ, ನಂದಿನಿ ಬಡಾವಣೆ ಶಾಖಾ ಗ್ರಂಥಾಲಯದ ಡಿಜಿಟಲ್ ಗ್ರಂಥಾಲಯಕ್ಕೆ ಚಾಲನೆ ನೀಡಿದರು. ಈ ಗ್ರಂಥಾಲಯದ ಮೊಬೈಲ್ ಆ್ಯಪ್‌ನಲ್ಲಿ ಪ್ರಸ್ತುತ 1 ಲಕ್ಷ ಪುಸ್ತಕಗಳು ಲಭ್ಯವಿದ್ದು, ಪಠ್ಯ ಪುಸ್ತಕ, ಸಮಾನ್ಯ ಜ್ಞಾನ, ಸ್ಪರ್ಧಾತ್ಮಕ ಪರೀಕ್ಷೆಗಳು, ರಾಷ್ಟ್ರೀಯ, ಅಂತರಾಷ್ಟೀಯ ಖ್ಯಾತ ಲೇಖಕರ ಪುಸ್ತಕಗಳು ಸೇರಿದಂತೆ 10 ಲಕ್ಷ ಪುಸ್ತಕಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದರು.

ಇದೇ ಸಮದರ್ಭದಲ್ಲಿ ಗ್ರಂಥಾಲಯದ 28 ಸಿಬ್ಬಂದಿಗಳಿಗೆ ಸೇವಾ ಪುರಸ್ಕಾರ ಪ್ರದಾನ ಮಾಡಿದರು.

ಸಮಾರಂಭದಲ್ಲಿ ರಾಜ್ಯಸಭಾ ಸದಸ್ಯರಾದ ಡಾ: ಎಲ್.ಹನುಮಂತಯ್ಯ, ವಿಧಾನ ಪರಿಷತ್ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ಸಾಹಿತಿಗಳು ಹಾಗೂ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರಾದ ಡಾ. ದೊಡ್ಡರಂಗೇಗೌಡ, ಭಾರತೀಯ ವಿಜ್ಞಾನ ಸಂಸ್ಥೆಯ ಗ್ರಂಥಪಾಲಕರಾದ ಡಾ. ಆನಂದ್ ಭೈರಪ್ಪ ಉಪಸ್ಥಿತರಿದ್ದರು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ. ಸತೀಶ ಕುಮಾರ ಎಸ್.ಹೊಸಮನಿ ಸ್ವಾಗತಿಸಿದರು.

JAWAHAR NAVODAYA VIDYALAYA, DISTT:BANGALORE URBAN

**JAWAHAR NAVODAYA VIDYALAYA SELECTION TEST-2021**

**Bengaluru, November-20 (Karnataka Information)**

The JNVST 2021 for admission to class VI for the academic year 2021-22 in Jawahar Navodaya Vidyalayas is cheduled to be held on **Saturday 10th April 2021** at 11.15 am The students who are studying in Class V for the academic year 2020-21 in Bangalore Urban District are eligible to appear for Exam.

The candidates have to enroll the applications through ONLINE and upload the duly filled in CERTIFICATE from the Head Master of School where the candidate is studying Class V at the time of registration that can be downloaded from the NVS website www.navodaya.gov.in or https://navodaya.gov.in/nvs/en/Admission-JNVST/JNVST-class The last date for submission of Application form through online is **15th December 2020** for JNV Selection Test, 2021.

For more information visit to Samiti website www.navodaya.gov.in or contact Vidyalaya Phone No.8746985884 says official Press Release.

**2021-22ನೇ ಸಾಲಿನ ಜವಾಹರ್ ನವೋದಯ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ**

**ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)**

ಜವಾಹರ್ ನವೋದಯ ವಿದ್ಯಾಲಯವು **2021-22** ನೇ ಸಾಲಿನ 6ನೇ ತರಗತಿಯ ದಾಖಾಲಾತಿಗಾಗಿ ಪ್ರವೇಶ ಪರೀಕ್ಷೆಯನ್ನು ದಿನಾಂಕ **10.04.2021** ರ ಶನಿವಾರ ಬೆಂಗಳೂರಿನ ಆಯ್ದ ಕೇಂದ್ರಗಳಲ್ಲಿ ನಡೆಸಲಾಗುವುದು. ಈ ಪ್ರವೇಶ ಪರೀಕ್ಷೆಗೆ ಮಾನ್ಯತೆ ಪಡೆದ ಶಾಲೆಯಲ್ಲಿ 2020-21 ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಓದುತ್ತಿರುವ ಮಕ್ಕಳು ಅರ್ಹರಾಗಿರುತ್ತಾರೆ.

ಅರ್ಜಿಗಳನ್ನು ಆನ್ ಲೈನ್ ಮೂಲಕ ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿವಾರಣಾ ಪತ್ರ ಮತ್ತು ಮುಖ್ಯೋಪಾಧ್ಯಾಯರ ದೃಢೀಕರಣ ಪತ್ರವನ್ನು ನವೋದಯ ಸಮಿತಿಯ ವೆಬ್ ಸೈಟ್ www.navodaya.gov.in ಅಥವಾ https://navodaya.gov.in/nvs/en/ Admission-JNVST/JNVST-class ನಿಂದ ಪಡೆದುಕೊಳ್ಳಬಹುದು. ಮುಖ್ಯೋಪಾಧ್ಯಾಯರ ದೃಢೀಕರಣ ಪತ್ರದೊಂದಿಗೆ ಪಾಲಕರು ಅರ್ಜಿಯನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಆನ್ ಲೈನ್ ಮೂಲಕ ಭರ್ತಿ ಮಾಡಲು ಕೊನೆಯ ದಿನಾಂಕ **15.12.2020** ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಮಿತಿಯ ವೆಬ್ ಸೈಟ್ www.navodaya.gov.in ಅಥವಾ ವಿದ್ಯಾಲಯದ ದೂರವಾಣಿ ಸಂಖ್ಯೆ **8746985884** ಗೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## 2020-21 ನೇ ಸಾಲಿನ ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

2020-21ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವ್ಯಾಪ್ತಿಗೆ ಒಳಪಡುವ ಸಂಗೀತ ನೃತ್ಯಾದಿ ಕಲೆಗಳಲ್ಲಿ ಹೆಚ್ಚಿನ ಸಂಶೋಧನೆ/ಅಧ್ಯಯನ ಮಾಡಲು ಆಸಕ್ತಿ ಹೊಂದಿರುವವರಿಗಾಗಿ ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸ್ನಾತಕೋತ್ತರ ಪದವೀಧರರಾಗಿರಬೇಕು. ವಯೋಮಿತಿ 45 ವರ್ಷದ ಒಳಗಿರಬೇಕು.

ಆಸಕ್ತರು ಸಂಶೋಧನೆ/ಅಧ್ಯಯನ ನಡೆಸುವ ವಿಷಯದ ಬಗ್ಗೆ ಸುಮಾರು 5-6 ಪುಟಗಳ ಸಾರ ಲೇಖನವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅಧ್ಯಯನದ ಅವದಿ, ಆರು ತಿಂಗಳು. ಅರ್ಹ ಅಭ್ಯರ್ಥಿಗಳನ್ನು ತಜ್ಞರ ಸಮಿತಿ ನಡೆಸುವ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಆಯ್ಕೆಯಾದವರಿಗೆ ರೂ: 1.00 ಲಕ್ಷ ಸಂಶೋಧನಾ ನೆರವನ್ನು ನೀಡಲಾಗುವುದು. (ಇದರಲ್ಲಿ ಮಾರ್ಗದರ್ಶಕರಿಗೆ ರೂ.10,000-00 ಗಳ ಗೌರವ ಸಂಭಾವನೆ ಹಾಗೂ ತಜ್ಞರಿಗೆ ರೂ.10,000-00 ಗಳ ಗೌರವ ಸಂಭಾವನೆ ಒಳಗೊಂಡಿರುತ್ತದೆ) ಆಯ್ಕೆಯಲ್ಲಿ ಅಕಾಡೆಮಿ ತೀರ್ಮಾನವೇ ಅಂತಿಮ.

ರಾಜ್ಯದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉಚಿತವಾಗಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಅಕಾಡೆಮಿ ಅಂತರ್ಜಾಲ ತಾಣ :https://karnatakasangeetanrityaacademy.comದ ಮೂಲಕ

ಪಡೆದು ಸಲ್ಲಿಸಬಹುದಾಗಿದೆ. ಅಕಾಡೆಮಿ ಕಾರ್ಯಾಲಯದಲ್ಲಿ ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ ಸ್ವವಿಳಾಸದ 10ರೂ. ಸ್ಟಾಂಪ್ ಹಚ್ಚಿದ ಲಕೋಟೆಯೊಂದಿಗೆ ಮನವಿ ಸಲ್ಲಿಸಿ, ಅಂಚೆ ಮೂಲಕ ಅರ್ಜಿಯನ್ನು ಪಡೆದು, ಸೂಕ್ತ ದಾಖಲಾತಿಯೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಕಾರ್ಯಾಲಯ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560 002 ಇಲ್ಲಿಗೆ ದಿನಾಂಕ: 15.12.2020ರಒಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಲಕೋಟೆಯ ಮೇಲೆ "ಫೆಲೋಶಿಪ್‌ಗಾಗಿ ಅರ್ಜಿ" ಎಂದು ನಮೂದಿಸಿರಬೇಕು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ವಸತಿ ಸಚಿವ ವಿ. ಸೋಮಣ್ಣ ಅವರು ನವೆಂಬರ್ 21 ರಂದು ರಾಮನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## "ಅಂತರರಾಷ್ಟ್ರೀಯ ದತ್ತು ಮಾಸಾಚರಣೆ ನವೆಂಬರ್-2020"
## "ಮಡಿಲ ಬೆಳಗು" – ದತ್ತು ಕಾರ್ಯಕ್ರಮ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಮಕ್ಕಳ ರಕ್ಷಣಾ ನಿರ್ದೇಶನಾಲಯವು ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವುದು ಪ್ರತಿಯೊಂದು ಮಗುವಿನ ಹಕ್ಕು. ಮಗುವಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತಾವರಣವು ಕಲ್ಪಿಸುತ್ತದೆ. ಈ ನಿಟ್ಟಿನಲ್ಲಿ ದತ್ತು ಪ್ರಕ್ರಿಯೆಯು ಅನಾಥ, ಪರಿತ್ಯಕ್ತ ಹಾಗೂ ಒಪ್ಪಿಸಲ್ಪಟ್ಟ ಮಕ್ಕಳ ಪುನರ್ವಸತಿಗೆ ನೆರವಾಗುವುದು ಮಕ್ಕಳ ರಕ್ಷಣಾ ಯೋಜನೆಯ ಉದ್ಧೇಶವಾತರುತ್ತದೆ. ಆದುದರಿಂದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ 2020ನೇ ವರ್ಷದ ನವೆಂಬರ್ ತಿಂಗಳನ್ನು ಅಂತರರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ದತ್ತು ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ಧೇಶದಿಂದ (1) ದತ್ತು ಪಡೆದ ಮಗುವಿನ ಸುರಕ್ಷಾ ಆರೈಕೆ, (2) ಮಕ್ಕಳನ್ನು ದತ್ತು ಪಡೆಯುವುದು ಪೋಷಕರಿಗೆ ಹಾಗೂ ಮಕ್ಕಳಿಗೆ ಹೇಗೆ ಸಂತೋಷದಾಯಕವಾಗಿರುತ್ತದೆ. (3) ಪೋಷಕತ್ವ ಸದರಿ ವಿಷಯಗಳ ಕುರಿತು ಪೋಸ್ಟರ್, ಕಿರುಚಿತ್ರ (ಶಾರ್ಟ್ ಫಿಲಂ 2 ನಿಮಿಷ ಮೀರಬಾರದು), ಡ್ಯಾನ್ಸ್ (2 ನಿಮಿಷ ಮೀರಬಾರದು) ಹಾಗೂ ಪದ್ಯ

**ರಚಿಸುವ ಆನ್‌ಲೈನ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ತಾವು ಸಿದ್ಧಪಡಿಸಿದ ಪೋಸ್ಟರ್, ಕಿರುಚಿತ್ರ ಡ್ಯಾನ್ಸ್ ಹಾಗೂ ಪದ್ಯ ರಚನೆಗಳ ಪ್ರತಿಯನ್ನು dcp.adoptionmonth2020@gmail.com ಇ-ಮೇಲ್ ವಿಳಾಸಕ್ಕೆ ಸಲ್ಲಿಸಲು ದಿನಾಂಕ:30-11-2020, ಸಂಜೆ-5.30ರವರೆಗೆ ದಿನಾಂಕವನ್ನು ವಿಸ್ತರಿಸಲಾಗಿದೆ. ಸದರಿ ಕಾರ್ಯಕ್ರಮದ ಹೆಚ್ಚಿನ ಮಾಹಿತಿಗಾಗಿ icps.karnataka.gov.in ವೆಬ್‌ಸೈಟ್ ನಲ್ಲಿ ಸಹ ವೀಕ್ಷಿಸಬಹುದಾಗಿದೆ.**

## ಬೆಂಗಳೂರು-ಶಿರಡಿ ಮಾರ್ಗದಲ್ಲಿ ಅಂಬಾರಿ ಡ್ರೀಮ್ ಕ್ಲಾಸ್ ಸಾರಿಗೆ ಕಾರ್ಯಾಚರಣೆ

**ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ, ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು-ಶಿರಡಿ ವಯಾ ಚಿತ್ರದುರ್ಗ, ಹುಬ್ಬಳಿ ಮತ್ತು ಪೂನಾ ಮಾರ್ಗದಲ್ಲಿ ಅಂಬಾರಿ ಡ್ರೀಮ್ ಕ್ಲಾಸ್ ಸಾರಿಗೆಯನ್ನು ದಿನಾಂಕ 20/11/2020 ರಿಂದ ಪುನರಾರಂಭಿಸಿ, ಈ ಕೆಳಕಂಡ ವೇಳಾಪಟ್ಟಿಯಂತೆ ಕಾರ್ಯಾಚರಣೆ ಮಾಡಲಾಗುತ್ತದೆ.

**<u>ವೇಳಾ ಪಟ್ಟಿ ಮತ್ತು ಪ್ರಯಾಣದ ದರದ ವಿವರಗಳು</u>**

**ಬೆಂಗಳೂರು-ಶಿರಡಿ** ವಯಾ ಚಿತ್ರದುರ್ಗ, ಹುಬ್ಬಳಿ ಮತ್ತು ಪೂನಾ (ಅಂಬಾರಿ ಡ್ರೀಮ್ ಕ್ಲಾಸ್)

| ಮಾರ್ಗ | ಪ್ರಾರಂಭಿಕ ದಿನಾಂಕ | ಪ್ರಯಾಣ ದರ ವಯಸ್ಕರು ರೂ. ಪೈಸೆ | ಬೆಂಗಳೂರಿನಿಂದ ಹೊರಡುವ ಸಮಯ | ಶಿರಡಿ ತಲುಪುವ ಸಮಯ | ಶಿರಡಿಯಿಂದ ಹೊರಡುವ ಸಮಯ | ಬೆಂಗಳೂರು ತಲುಪುವ ಸಮಯ |
|---|---|---|---|---|---|---|
| ಬೆಂಗಳೂರು-ಶಿರಡಿ | 20/11/2020 | 1600=00 | 1300 | 0630 | 1300 | 0730 |

## Ambaari Dream Class Service from Bengaluru to Shiradi

Bengaluru, November 20 (Karnataka Information)

Karnataka State Road Transport Corporation has planned to operate (Restore) Ambaari Dream Class Service for the convenience of the travelling public on the route: Bengaluru to Shirdi via Chitradurga, Hubli, Poona w.e.f **20/11/2020.** The Ticket fare and time table details are furnished below:-

Bengaluru to Shirdi **via Chitradurga, Hubli, Poona** (**Ambaari Dream Class** )

| **Route** | **Date of Introduction** | **Adult Fare Rs. Ps** | **Departure From Bengaluru** | **Arrival at Shirdi** | **Departure From Shirdi** | **Arrival at Bengaluru** |
|---|---|---|---|---|---|---|
| **Bengaluru-Shirdi** | 20/11/2020 | 1600/- | 1300 | 0630 | 1300 | 0730 |

## ಅವಧಿ ವಿಸ್ತರಣೆ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ., ಬೆಂಗಳೂರು-88 ಈ ಸಂಸ್ಥೆಯು ಚಲನಚಿತ್ರ ಮತ್ತು ಮಾಧ್ಯಮ ಕ್ಷೇತ್ರಗಳಿಗೆ ಸಂಬಂಧಿಸಿದ (1) ಸಿನಿಮಾಟೋಗ್ರಫಿ ಮತ್ತು (2) ಸೌಂಡ್ ರೆಕಾರ್ಡಿಂಗ್ ಅಂಡ್ ಇಂಜಿನಿಯರಿಂಗ್, ಡಿಪ್ಲೋಮಾ ಕೋರ್ಸುಗಳನ್ನು ಬೋಧಿಸುವ ಕರ್ನಾಟಕದ ಏಕೈಕ ಸಂಸ್ಥೆಯಾಗಿದೆ.

2020-21 ನೇ ಶೈಕ್ಷಣಿಕ ಸಾಲಿಗೆ ಖಾಲಿ ಉಳಿದಿರುವ ಪ್ರಥಮ ಸೆಮಿಸ್ಟರ್ ಮತ್ತು ತೃತೀಯ ಸೆಮಿಸ್ಟರ್ ಡಿಪ್ಲೋಮಾ ಸೀಟುಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾರ್ವಜನಿಕ ಹಿತದೃಷ್ಟಿಯಂದ ಸಾಮಾನ್ಯ ವರ್ಗದಡಿಯಲ್ಲಿ ಆಫ್-ಲೈನ್ ಮೂಲಕ ಭರ್ತಿಮಾಡಲು ಪ್ರವೇಶಾತಿ ಕಾಲಾವಧಿಯನ್ನು ದಿನಾಂಕ:30-11-2020ರ ವರೆಗೆ ವಿಸ್ತರಿಸಲಾಗಿರುತ್ತದೆ. ಈ ದಿನಾಂಕದ ಒಳಗಾಗಿ ಮೂಲ ದಾಖಲೆಗಳೊಂದಿಗೆ ನೇರವಾಗಿ ಬೇಟಿ ನೀಡಿ ಪ್ರವೇಶಾತಿಯನ್ನು ಪಡೆಯಬಹುದು

ಎಸ್.ಎಸ್.ಎಲ್.ಸಿ/ತತ್ಸಮಾನ ವಿದ್ಯಾರ್ಹತೆಯ ಪರೀಕ್ಷೆಯ ತೇರ್ಗಡೆಯಾದವರಿಗೆ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ. ದ್ವಿತೀಯ ಪಿಯುಸಿ-ವಿಜ್ಞಾನ ವಿಷಯದಲ್ಲಿ ತೇರ್ಗಡೆ ಹೊಂದಿರುವವರಿಗೆ ತೃತೀಯ ಸೆಮಿಸ್ಟರ್‌ಗೆ (ಲ್ಯಾಟರಲ್ ಎಂಟ್ರಿ) ಪ್ರವೇಶ.

.

ಹೆಚ್ಚಿನ ವಿವರಗಳಿಗಳಿಗಾಗಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್: https://dtetech.karnataka.gov.in/kartechnical ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ

ವೆಬ್‌ಸೈಟ್: www.cetonline.karnataka.gov.in/kea ಹಾಗೂ ದೂರವಾಣಿ : 9686754592, 9844288324, 8970101477 ಗಳನ್ನು ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆವಿಕಂ ವಿದ್ಯುತ್ ಭದ್ರತಾ ಠೇವಣಿ

**ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)**

ಬೆಂಗಳೂರು ವಿದ್ಯುತ್ ಕಂಪೆನಿ ತನ್ನ ಗ್ರಾಹಕರಿಗೆ ಆರ್ಥಿಕ ವರ್ಷ 2019-20 ಸಾಲಿನ ವಿದ್ಯುತ್ ಭದ್ರತಾ ಠೇವಣಿಯ ಮೇಲಿನ ಬಡ್ಡಿಯನ್ನು 01.04.2020ಗೆ ಅನ್ವಯವಾಗುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿದರದಂತೆ, ವಾರ್ಷಿಕ 6.50% ರಂತೆ ಬಡ್ಡಿಯನ್ನು ನೀಡಲಿದೆ. ಹೆಚ್.ಟಿ ಗ್ರಾಹಕರಿಗೆ ನವೆಂಬರ್ 2020 ಮಾಹೆಯಲ್ಲಿ ಹಾಗೂ ಎಲ್.ಟಿ ಗ್ರಾಹಕರಿಗೆ ಡಿಸೆಂಬರ್ 2020 ರ ಮಾಹೆಯಲ್ಲಿ ನೀಡುವ ವಿದ್ಯುತ್ ಬಿಲ್ಲಿಗೆ ಜಮೆ ಮಾಡಲಾಗುತ್ತದೆ.

## BESCOM Credit Interest on Consumer Deposits

**Bengaluru, November 20 (Karnataka Information)**

BESCOM is pleased to Credit Interest on Consumer Deposits at 6.50% per annum for the FY 2019-20. Interest amount will be credited to their electricity bills, for HT Consumers in the month of November 2020 and for LT Consumers in the month of December-2020. This as per the RBI interest rate as on 01.04.2020.

## ಮುಖ್ಯಮಂತ್ರಿಗಳಿಂದ ಪೋಲೀಸ್ ಪದಕ ಪ್ರಧಾನ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ):

ಪೋಲೀಸ್ ಇಲಾಖೆಯಲ್ಲಿ ಅಪ್ರತಿಮ ಸೇವೆ ಹಾಗೂ ಗಣನೀಯ ಕಾರ್ಯ ಸಲ್ಲಿಸಿದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಇಂದು ವಿಧಾನಸೌಧದ ಬ್ಯಾಕ್ವೆಂಟ್

ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿದರು.

2017 ಮತ್ತು 2018 ನೇ ಸಾಲಿನ ಮುಖ್ಯಮಂತ್ರಿಯವರ ಪದಕ ಪ್ರದಾನ ಸಮಾರಂಭದಲ್ಲಿ ಪದಕ ವಿಜೇತರಾದ ಎಲ್ಲಾ ಪೊಲೀಸ್ ಬಂಧುಗಳಿಗೆ ಅಭಿನಂದನೆ ಸಲ್ಲಿಸುತ್ತಾ ಕರ್ನಾಟಕ ಪೊಲೀಸ್ ಪಡೆ ಅತ್ಯಂತ ವಿಶ್ವಾಸಾರ್ಹ ಮತ್ತು ದಕ್ಷ ಪೊಲೀಸ್ ಪಡೆಯೆಂದೆ ಹೆಸರಾಗಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ತಮ್ಮ ಶೌರ್ಯ, ನಿಸ್ವಾರ್ಥ ಸೇವೆ, ಕರ್ತವ್ಯ ನಿಷ್ಠೆ ಮೂಲಕ ಅಪ್ರತಿಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದರು.

ಪೊಲೀಸರು ಕಾನೂನು ಮತ್ತು ಸುವ್ಯವಸ್ಥೆ, ನಕ್ಸಲೈಟ್ ಚಟುವಟಿಕೆಗಳ ನಿಗ್ರಹ, ಗುಪ್ತವಾರ್ತೆಗಳ ಸಂಗ್ರಹ, ರಸ್ತೆ ಸಂಚಾರ ಸುರಕ್ಷತೆ, ಜಟಿಲ ಪ್ರಕರಣಗಳ ತನಿಖೆ, ಕಳವು ಮಾಲನ್ನು ವಶಕ್ಕೆ ಪಡೆಯುವುದು ಮತ್ತಿತರ ಮೊದಲಾದ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ವೃತ್ತಿ ನಿಪುಣತೆಯನ್ನು ಪ್ರದರ್ಶಿಸುತ್ತಾರೆ. ಸಮಾಜದ ಸ್ವಾಸ್ಥ್ಯವನ್ನು ಕೆಡಿಸಲು ಪ್ರಯತ್ನಿಸುವ ಸಂಘಟಿತ ಅಪರಾಧಿಗಳು, ಸಮಾಜ ವಿರೋಧಿ ಶಕ್ತಿಗಳು, ಮತೀಯವಾದಿಗಳನ್ನು ನಿಯಂತ್ರಿಸಲು ನಮ್ಮ ಪೊಲೀಸರು ಹಗಲಿರುಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಮ್ಮ ಪೊಲೀಸ್ ಸಿಬ್ಬಂದಿಯ ಬದ್ಧತೆಯಿಂದ ಅಪರಾಧಮುಕ್ತ ಸಮಾಜ ನಿರ್ಮಾಣವಾಗಲಿದೆ ಎಂದರು

ಪದಕವು ವಿಜೇತರ ಸಾಧನೆಯ ಸಂಕೇತವಾಗಿರುವುದಲ್ಲದೆ ಇತರೆ ಸಿಬ್ಬಂದಿಗೂ ಇವರ ಸಾಧನೆ ಪ್ರೇರಣಾದಾಯಕವಾಗಿದೆ. ಪದಕ ವಿಜೇತರಿಗೆ ಹತ್ತು ಸಾವಿರ ಮೊತ್ತವನ್ನ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ. ರಾಜ್ಯದ ಪೋಲೀಸರ ಮನೋಸ್ಥೈರ್ಯವನ್ನು ಹೆಚ್ಚಿಸಿ, ಅವರು ನಿಸ್ವಾರ್ಥ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಪೊಲೀಸ್ ಸಿಬ್ಬಂದಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಮಹಿಳೆಯರಿಗೆ ಅನುಕೂಲವಾಗುವಂತೆ ಮಹಿಳಾ ಪೊಲೀಸ್ ಠಾಣೆಗಳನ್ನು ಒನ್‌ಸ್ಟಾಪ್ ಸರ್ವಿಸ್ ಕೇಂದ್ರಗಳಾಗಿ ಮಾರ್ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಇವರು ನಾಗರೀಕರ ಶಾಂತಿಯುತ ಜೀವನಕ್ಕೆ ಕಾರಣೀಭೂತರಾಗಿದ್ದಾರೆ. ಸಮಾಜದ ಶಾಂತಿ ನೆಮ್ಮದಿ ಕಾಪಾಡುವುದು ಪೊಲೀಸ್ ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಕರ್ತವ್ಯ ನಿರ್ವಹಣೆಯಲ್ಲಿ ಕರ್ನಾಟಕ ಪೊಲೀಸರು ತಮ್ಮ ದಕ್ಷತೆ, ಪ್ರಾಮಾಣಿಕತೆಗಳನ್ನು ಸಾಬೀತು ಮಾಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿದರು.

ಪೊಲೀಸರು ಹೆಚ್ಚು ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವ ಮೂಲಕ ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನಿರ್ಭಿತಿಯಿಂದ ಪೊಲೀಸ್ ಠಾಣೆಗೆ ಬರುವಂತಾಗಬೇಕು ಎಂದು ತಿಳಿಸಿದರು.

ನಂತರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗೃಹಸಚಿವ ಬಸವರಾಜ ಬೊಮ್ಮಾಯಿ ಅವರು ಮಾತನಾಡಿ, ಪದಕ ವಿಜೇತ ಪೊಲೀಸ್ ಸಿಬ್ಬಂದಿಗಳಿಗೆ ಇಂದು ಸಂತೋಷದ ದಿನವಾಗಿದೆ. ಎರಡು ವರ್ಷದಿಂದ ಪದಕ ವಿತರಿಸಲು ಸಾಧ್ಯವಾಗಿರುವುದಿಲ್ಲ. ನೂರಾರು ಪೊಲೀಸ್ ಸಿಬ್ಬಂದಿ ತಮ್ಮ ಕರ್ತವ್ಯ ಮೀರಿ ಸವಾಲುಗಳನ್ನು ಎದುರಿಸಿದ್ದನ್ನು ಸರ್ಕಾರ ಗುರುತಿಸಿದೆ ಎಂದು ಪದಕ ವಿಜೇತರಿಗೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರಾದ ಪ್ರವೀಣ್ ಸೂದ್ ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್ ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ):**

**ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 19-02-2018 ರಲ್ಲಿ ಅಧಿಸೂಚಿಸಲಾಗಿದ್ದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯದ ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳಲ್ಲಿನ ಡ್ರಾಫ್ಟ್‌ಮೆನ್ ಸಿವಿಲ್ ವೃತ್ತಿ-3+1(ಹೈ.ಕ) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಕಟ್-ಆಫ್ ಅಂಕಗಳೊಂದಿಗೆ ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲ http://kpsc.kar.nic.in ನಲ್ಲಿ ಪ್ರಕಟಿಸಿದೆ. ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾದ ದಿನಾಂಕದಿಂದ 7 ದಿನಗಳೊಳಗಾಗಿ "ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು-01 ಇವರಿಗೆ ಸಲ್ಲಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಬನ್ನಿ ಎಲ್ಲರೂ ಕೂಡಿ ಕನ್ನಡದ ಕೆಲಸ ಮಾಡೋಣ ; ಶ್ರೀ ಟಿ.ಎಸ್.ನಾಗಾಭರಣ

ಕನ್ನಡ ಕಾಯಕ ವರ್ಷ ೨೦೨೦-೨೧ರ ಕನ್ನಡ **ಕಾಯಕ ಪಡೆ** ಯ ನೋಂದಣಿ ಇಂದಿನಿಂದ ಪ್ರಾರಂಭವಾಗಲಿದ್ದು, ನೋಂದಣಿ ಕೊಂಡಿಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕೃತ ಜಾಲತಾಣ (https://kannadapraadhikaara.karnataka.gov.in/), ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ (https://www.facebook.com/kannadadevelopmentauthority), ಟ್ವಿಟರ್ (https://twitter.com/kdabengaluru) ಗಳಲ್ಲಿ ಇಂದಿನಿಂದ ಲಭ್ಯವಿರುತ್ತವೆ ಕನ್ನಡ ಪರ ಕೆಲಸ ಮಾಡಲು ಆಸಕ್ತರಿರುವ ಎಲ್ಲಾ ಕನ್ನಡಿಗರು ಯಾವುದೇ ವಯಸ್ಸು, ವೃತ್ತಿಯ ಅಂತರವಿಲ್ಲದೇ ಈ ಪಡೆಯ ಸದಸ್ಯರಾಗಬಹುದು ಎಂದು ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ. ಟಿ. ಎಸ್. ನಾಗಾಭರಣ ಕರೆ ನೀಡಿದರು.

#ಕನ್ನಡ–ಕಾಯಕ–ವರ್ಷ–2020–21

**ಪ್ರಿಯ ಹೆಮ್ಮೆಯ ಕನ್ನಡಿಗರೇ,**

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೊರೊನೋತ್ತರ ಜನಜೀವನದಲ್ಲಿ ಕನ್ನಡದ ಕಂಪನ್ನು ಪಸರಿಸಲು ಈ ನವೆಂಬರ್ ನಿಂದ ಮುಂದಿನ ವರ್ಷ ಅಕ್ಟೋಬರ್ 31 ರ ವರೆಗೆ ಒಂದು ವರ್ಷದ ಕನ್ನಡ ವರ್ಷವನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಘೋಷಣೆಯಾಗಿರುವ **ಕನ್ನಡ ಕಾಯಕ ವರ್ಷ** ಹೆಸರಿನಲ್ಲಿ ಆಚರಿಸುತ್ತಿರುವುದು ನಿಮಗೆಲ್ಲಾ ಗೊತ್ತೇ ಇದೆ.

*ನೀವು ಕನ್ನಡ ಕೆಲಸ ಮಾಡಲು ಸಿದ್ದರಿದ್ದೀರಾ?

*ನೀವು ಕನ್ನಡ ಕಾಯಕ ವರ್ಷದ ಕನ್ನಡ ಕಾಯಕ ಪಡೆಯ ಸದಸ್ಯರಾಗಬಯಸುತ್ತೀರ?

ಈಗಲೇ ನೋಂದಾಯಿಸಿ ನೀವಿರುವಲ್ಲಿ ಕನ್ನಡವನ್ನು ಬಳಸಿ, ಬೆಳಸಿ, ಪಸರಿಸಿ.

**''ಬನ್ನಿ ಎಲ್ಲರೂ ಕೂಡಿ ಕನ್ನಡದ ಕೆಲಸ ಮಾಡೋಣ''**

– ಶ್ರೀ. ಟಿ. ಎಸ್. ನಾಗಾಭರಣ

ಅಧ್ಯಕ್ಷರು

ಕನ್ನಡ ಅಭಿವೃದ್ದಿ ಪ್ರಾಧಿಕಾರ

ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.

https://docs.google.com/forms/d/e/1FAIpQLSdH-bcVPbPXKnRJPKkyDzPckSSgbOxLXptTjfj9WriJaRaPLg/viewform?usp=pp_url

**(ಈ ಮಾಹಿತಿಯನ್ನು ತಮ್ಮ ಘನ ಪತ್ರಿಕೆಯಲ್ಲಿ ವರದಿ ಮಾಡಿ ಸಹಕಾರ ನೀಡುವಂತೆ ಕೋರಿಕೆ)**

--

#ಕನ್ನಡ_ಕಾಯಕ_ವರ್ಷ_೨೦೨೦_೨೧